ಓಎಸ್ ನಂ. **207/2019**
**ಪಿಡಬ್ಲ್ಯೂ 1**

ಸಾಕ್ಷಿಯನ್ನು ದಿಃ **16.06.2022.** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ.ಬಿ.ಟಿ.ಆರ್. ವಕೀಲರಿಂದ

ಸಾಕ್ಷಿ ಇಂದು ಸಾಕ್ಷಿ ಕಟ್ಟೆಯಲ್ಲಿ ನಿಂತು ತಮ್ಮ ಮುಂದುವರೆದ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ತಿಳಿಸಿರುವ ಅಂಶಗಳಲ್ಲೆವು ಸತ್ಯವಾಗಿರುತ್ತದೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

1977 ರಿಂದ 1978 ರವರೆಗೆ ಮನೆ ಹಂಚಿಕೆ ಆದ ಮನೆಗಳ ದಾಖಲು ಪಟ್ಟಿಯ ಧೃಡೀಕೃತ ಪ್ರತಿಯನ್ನು ನಿಪಿ-**1** ಎಂದು, 2000 -2001 ನೇ ಸಾಲಿನ ದಾವಾ ಆಸ್ತಿಯ ಖಾತಾ ರೋಟೇಷನ್ ರಿಜಿಸ್ಟರ್ ದಾಖಲೆಯನ್ನು ನಿಪಿ-**2** ಎಂದು, 2004 -2005 ನೇ ಸಾಲಿನ ದಾವಾ ಆಸ್ತಿಯ ಖಾತಾ ರೋಟೇಷನ್ ರಿಜಿಸ್ಟರ್ ದಾಖಲೆಯನ್ನು ನಿಪಿ-**3** ಎಂದು, 2018-2019 ರ ಅಸ್ಸೆ ಸ್ಮೆಂಟ್ ರಿಜಿಸ್ಟರ್ ಗಳ 2 ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-**4** ಮತ್ತು ನಿಪಿ-**5** ಎಂದು, ಅಮೃತೂರು ಗ್ರಾಮ ಪಂಚಾಯಿತಿಯವರಿಗೆ , ಪಿಡಿಓ ಗಳಿಗೆ ಶಂಕ್ರಪ್ಪರವರಿಂದ ಹಳೆಯ ಮನೆಯನ್ನು ಕೆಡವಿ ಹಾಕಲು ಅನುಮತಿ ಪಡೆದು ಪತ್ರ ಅದನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**6** ಎಂದು, ಸದರಿ ಪಂಚಾಯಿತಿಯವರು ದಿಃ 05.09.2017 ರಂದು ನೀಡಲಾದ ಅನುಮತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**7** ಎಂದು, ಅಮೃತೂರು ಗ್ರಾಮ ಸ್ವತ್ತಿನ ಸಂಖ್ಯೆ 421/395 ರ ಜಾಗದ ಅಳತೆ ಮಾಡುವ ಸಂಬಂಧ ನೀಡಲಾದ ಅರ್ಜಿಯ ಧೃಡೀಕೃತ ಪತ್ರವನ್ನು ನಿಪಿ-**8** ಎಂದು, ಗ್ರಾಮಸ್ಥರು ಸಮಕ್ಷಮ ಬರೆಸಿದ ಹೇಳಿಕೆ ದಾಖಲೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-**9** ಎಂದು, ಅಮೃತೂರು ಗ್ರಾಮ ತೇರುಬೀದಿ ಹಳೆಯ ಗ್ರಾಮದ ನಿವೇಶನಕ್ಕೆ ಸಂಬಧಿಸಿದಂತೆ ಮಾರುಕಟ್ಟೆ ದರಪಟ್ಟಿಯನ್ನು ಸಂಬಂಧಪಟ್ಟ ನೋಂದಣಾಧಿಕಾರಿಗಳವರಿಂದ ಹಾಜರುಪಡಿಸಿದ್ದು ಅದನ್ನು ನಿಪಿ-**10** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು , ಸಮಯ ನೀಡಲಾಯಿತು.

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ
ಕುಣಿಗಲ್